## ಸುರತ್ಕಲ್ ಎನ್ಐಟಿಕೆಯ ವಸತಿಗೃಹಗಳಿಗೆ ಕೊಳವೆ ಮೂಲಕ ಪೂರೈಕೆಯಾಗಲಿದೆ ಅನಿಲ

# ಜಿಜಿಎಲ್‌ನೊಂದಿಗೆ ಎನ್ಐಟಿಕೆ ಒಪ್ಪಂದ

**ಮಂಗಳೂರು:** ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್ಐಟಿಕೆ) ಸುರತ್ಕಲ್‌ನಲ್ಲಿರುವ ತನ್ನ ಎಲ್ಲಾ ಬೋಧಕ ಮತ್ತು ಸಿಬ್ಬಂದಿ ವಸತಿಗೃಹಗಳಿಗೆ ಕೊಳವೆ ಮೂಲಕ ಅನಿಲ ಪೂರೈಸಲು ಗೇಲ್ (ಇಂಡಿಯಾ) ಲಿಮಿಟೆಡ್ ಸ್ವಾಮ್ಯದ ಅಂಗ ಸಂಸ್ಥೆಯಾದ ಗೇಲ್ ಗ್ಯಾಸ್ ಲಿಮಿಟೆಡ್ (ಜಿಜಿಎಲ್)ನೊಂದಿಗೆ ಬೃಹತ್ ದೇಶೀಯ ಪೈಪ್ಡ್ ನ್ಯಾಚುರಲ್ ಗ್ಯಾಸ್ ಒಪ್ಪಂದಕ್ಕೆ ಸಹಿ ಹಾಕಿದೆ.

ಬುಧವಾರ ಎನ್ಐಟಿಕೆ ಕ್ಯಾಂಪಸ್‌ನಲ್ಲಿ ಗೇಲ್ ಮಂಗಳೂರು ಪೆಟ್ರೋಲ್ ಕೆಮಿಕಲ್ಸ್ ಲಿಮಿಟೆಡ್ (ಜಿಎಂಪಿಎಲ್) ಸಿಇಒ ಸುಧೀರ್ ಕುಮಾರ್ ದೀಕ್ಷಿತ್ ಅವರ ಉಪಸ್ಥಿತಿಯಲ್ಲಿ ಸುರತ್ಕಲ್ ಎನ್ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಮತ್ತು ಮಂಗಳೂರಿನ ಗೇಲ್ ಗ್ಯಾಸ್ ಜಿಎಂ (ಸಿಜಿಡಿ) ಪ್ರಾಜೆಕ್ಟ್ ಮತ್ತು ಮುಖ್ಯಸ್ಥ ಸಾಯಿ ಶಂಕರ್ ಬಿ. ಅವರು ಒಪ್ಪಂದಕ್ಕೆ ಸಹಿ ಹಾಕಿದರು. ಸಮಾರಂಭದಲ್ಲಿ ಯೋಜನೆ ಮತ್ತು ಅಭಿವೃದ್ಧಿ ಡೀನ್ ಪ್ರೊ.ಕೆ.ವಿ.ಗಂಗಾಧರನ್, ಡೀನ್ ಪ್ರೊ. ಉದಯ ಭಟ್ ಕೆ, ಪ್ರೊ. ದ್ವಾರಕೇಶ್, ಅಕಾಡೆಮಿಕ್ ಡೀನ್, ಡೀನ್ ಪ್ರೊ.ಶ್ರೀಕಾಂತ ಎಸ್, ರಾವ್, ಜಂಟಿ ರಿಜಿಸ್ಟ್ರಾರ್ ರಾಮ್ ಮೋಹನ್ ವೈ, ಮತ್ತು ಎನ್ಐಟಿಕೆ ತಂಡದ ಸದಸ್ಯರು ಮತ್ತು ಗೇಲ್ ಗ್ಯಾಸ್ ಮಾರ್ಕೆಟಿಂಗ್ ಹಿರಿಯ ವ್ಯವಸ್ಥಾಪಕ ಧರ್ಮೇಂದ್ರ ಕುಮಾರ್ ಉಪಸ್ಥಿತರಿದ್ದರು.



ಎನ್ಐಟಿಕೆ ಕ್ಯಾಂಪಸ್‌ನಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಯಿತು.

ಸಮಾರಂಭದ ಬಳಿಕ ಸಂಶೋಧನೆಯಲ್ಲಿ ಭವಿಷ್ಯದ ಸಹಯೋಗದ ವ್ಯಾಪ್ತಿಯ ಕುರಿತು ಚರ್ಚಿಸಲಾಯಿತು. ವಿಶೇಷವಾಗಿ ವಿತರಣಾ ಪೈಪ್ ಲೈನ್‌ಗಳ ಸುರಕ್ಷತೆ ಮತ್ತು ಸಿಸ್ಟಮ್ ಮೇಲ್ವಿಚಾರಣೆಯ ಯಾಂತ್ರೀಕೃತಗೊಳಿಸುವಿಕೆ ಜೊತೆಗೆ ಎನ್ಐಟಿಕೆ ವಿದ್ಯಾರ್ಥಿಗಳಿಗೆ ವರ್ಧಿತ ಇಂಟರ್‌ಶಿಪ್ ಮತ್ತು ಉದ್ಯೋಗದ ಸಾಧ್ಯತೆಗಳನ್ನು ಚರ್ಚಿಸಲಾಯಿತು.

### ಪರಿಸರ ಸ್ನೇಹಿ ಇಂಧನ

ಈ ಒಪ್ಪಂದಂತೆ ಎನ್ಐಟಿಕೆ ಸುರತ್ಕಲ್‌ನ ಎಲ್ಲಾ ವಸತಿ ಗೃಹಗಳಿಗೆ ಪಿಎನ್‌ಜಿಯ ಸ್ಮಾರ್ಟ್ ಇಂಧನ ವ್ಯವಸ್ಥೆ ದೊರಕಿಸಿಕೊಡಲು ಗೇಲ್ ಗ್ಯಾಸ್ ಕ್ರಮ ವಹಿಸಲಿದೆ. ಇದು ಬಳಸಲು ಸುಲಭ ಮತ್ತು ಪರಿಸರ ಸ್ನೇಹಿ ಇಂಧನವಾಗಿದೆ. ಈ ಒಡಂಬಡಿಕೆ ಎನ್ಐಟಿಕೆ ಮತ್ತು ಗೇಲ್ ನಡುವಿನ ದೀರ್ಘಕಾಲದ ಸಂಬಂಧವನ್ನು ಮತ್ತಷ್ಟು ವಿಸ್ತರಿಸುತ್ತದೆ.

Hosa Diganta, Date:17/05/24, P, no-07